ಎನ್. ವೈದೇಹಿ, ಮೈಸೂರು
ಇಂದಿನ ಮಕ್ಕಳಿಗೆ ಸಕಲ ಸವಲತ್ತುಗಳನ್ನು ಮಾಡಿಕೊಡುವ ಪೋಷಕರು ಅವರಿಗೋಸ್ಕರ ಸಮಯವನ್ನೇಕೆ ಕೊಡುವುದಿಲ್ಲ?



ಆ ಸವಲತ್ತುಗಳನ್ನು ಒದಗಿಸಲೆಂದು ಮಾಡಿದ ಸಾಲಗಳನ್ನು ತೀರಿಸಲು ದುಡಿಯಬೇಕಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು
ಪಾನಿಪುರಿಯನ್ನು ಕನ್ನಡದಲ್ಲಿ ಏನೆಂದು ಕರೆಯುತ್ತಾರೆ ಸಾರ್?
ತ್ರಿರಸೋಪೇತಶಾಕಾವಿಷ್ಟಭೃಷ್ಟಗೋಧೂಮ ಚೂರ್ಣ.

ರಾಘವೇಂದ್ರ ಇನಾಮದಾರ, ಹುಬ್ಬಳ್ಳಿ
ನಿಜಕ್ಕೂ ಡ್ರಗ್ಸ್ ಎಂದರೆ ಏನು ರಾಮ್?
ಅಸ್ವಸ್ಥರಿಗೆ ಔಷಧ, ಸ್ವಸ್ಥರಿಗೆ ರೋಗ ಆಗುವಂತಹ ದ್ರವ್ಯ.

ಅನಸೂಯ ಟಿ, ಕೇದಿಗೆಮನೆ
ಚಿನ್ನದಂಗಡಿಯಲ್ಲಿ ಚೌಕಾಶಿ ಮಾಡದ ಜನ ಚಪ್ಪಲಿ ಹೊಲಿಯುವವನ ಜೊತೆ ಚೌಕಾಶಿಗೆ ಇಳಿಯುತ್ತಾರಲ್ಲಾ...?



ಬೀಗುವವರು ಬಾಗರು, ಬಾಗುವವರು ಬೀಗರು ಎನ್ನುವುದೇ ಇದಕ್ಕೆ ಕಾರಣ.

ರಾಮಸ್ವಾಮಿ, ಭೀಮನಕಟ್ಟೆ
ಅಳಿಯ ಮಗನಂತಾಗುತ್ತಾನೆ. ಸೊಸೆ ಏಕೆ ಮಗಳಾಗೋದಿಲ್ಲ?
ಪಳಗಿಸುವ ಕಲೆಯಲ್ಲಿ ಮಗನಿಗಿಂತ ಮಗಳು ಹೆಚ್ಚು ಸಮರ್ಥಳಾದ್ದರಿಂದ.

ಸುಮನಾ, ತೆಲಂಗಾಣ
ಚಂದ್ರನಿಗೆ ತುಕ್ಕು ಹಿಡಿಯುತ್ತದಂತೆ? ಹಾಗಾದರೆ ಚಂದ್ರನು ಸಂಪೂರ್ಣ ಉಕ್ಕಿನ ಖನಿಜವೆ?
ಇದೊಂದು ಬುದ್ಧಿಗೆ ತುಕ್ಕು ಹಿಡಿದವರು ಮಾಡಿರುವ ವರದಿ ಎಂದು ಚಂದ್ರನೇ ಹೇಳಿದನಂತೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಒಂದು ಒಳ್ಳೆಯ ಉತ್ತರ ಕೊಡಿ. ಅದರ ಮೇಲೆ ನಾನು ಪ್ರಶ್ನೆ ಕೇಳುತ್ತೇನೆ...?
ಕಾಂಪಾಸ್ ಕೊಂಡುಕೊಳ್ಳಿ. ಕೂಡಲೆ ಒಳ್ಳೆಯ ಉತ್ತರ ಸಿಗುತ್ತದೆ.

ಬಿ.ಎನ್. ನರಸಿಂಹಮೂರ್ತಿ, ಚೆನ್ನೈ
ಮಾಸ್ ಹೀರೋವಿಗೂ, ಮಾಸ್ಕ್ ಹೀರೋವಿಗೂ ವ್ಯತ್ಯಾಸವೇನು ಅಣ್ಣಾ?
ಮಾಸ್ ಹೀರೋ ಸಜ್ಜನ; ಮಾಸ್ಕ್ ಹೀರೋ ಸರ್ಜನ.

ಶಾ.ರಾ.ದೇ., ತುಮಕೂರು
ಪ್ರಶ್ನೆ ಕೇಳುವವನು ತಾತ್ಕಾಲಿಕವಾಗಿ ಮೂರ್ಖ, ಕೇಳದೆ ಇರುವವನು ಶಾಶ್ವತ ಮೂರ್ಖ ಏನಂತೀರಿ?
ಕೇಳುವವನು ಜಿಗೀಷು; ಕೇಳದವನು ಪಶು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಇಷ್ಟು ಸಂಕೀರ್ಣವಾದ ನರಶರೀರವನ್ನು ಕೌಶಲದಿಂದ ಸೃಷ್ಟಿಸಿದವನು ರೋಗಸೂಚಕ ಮೀಟರ್ ಅಳವಡಿಸದ್ದಿದ್ದರೆ?
ಕೊರೊನಾ ಟೆಸ್ಟಿಂಗ್ ಸೆಂಟರ್‌ಗಳ ಅಗತ್ಯವಿರುತ್ತಿರಲಿಲ್ಲ.

ರಾಜೀವ್ ಮಾಗಲ್, ಸಕಲೇಶಪುರ
ಮೌನಂ ಸಮ್ಮತಿ ಲಕ್ಷಣಂ ಸರಿಯೋ, ಮೌನಂ ಧೂರ್ತ ಲಕ್ಷಣಂ ಸರಿಯೋ?
ಈಗಿನ ಕಾಲಕ್ಕಂತೂ ಮೌನಂ ಮೊಬೈಲ್ ವೀಕ್ಷಣನಿರತ ಲಕ್ಷಣಂ.

ಸಾಗರೀ, ಬೆಂಗಳೂರು
ಅರಿವಿಗೆ ಬಂದಮೇಲೆ ಮರೆಯುವುದು ಸರಿಯೆ?
ಅರಿವಿಗೆ ಬಂದದ್ದು ಹೊಲಸಾದುದಾದರೆ ಮರೆಯುವುದು ಸರಿಯಷ್ಟೇ ಅಲ್ಲ, ಅನಿವಾರ್ಯ.

ರಾಜೇಶ್ವರಿ ಮಯ್ಯ, ಪುತ್ತೂರು
ಅಬ್ಬರಿಸಿ ಬೊಬ್ಬಿರಿಯಲು, ವಿಷಯವನ್ನು ಭೀಕರವಾಗಿ ವರ್ಣಿಸಲು ಗೊತ್ತಿದೆ. ನ್ಯೂಸ್ ರೀಡರ್ ಆಗಲು ಅರ್ಜಿ ಸಲ್ಲಿಸಲೆ?
ಗುರಿ ಇನ್ನೂ ಎತ್ತರಕ್ಕಿರಲಿ. ಕೊಂಚ ವಸೂಲಿ ವಿದ್ಯೆ ಕಲಿತು ಚಾನಲ್ಲನ್ನೇ ಆರಂಭಿಸಿ.

## ಬಹುಮಾನಿತ ಪ್ರಶ್ನೆ

ಬಿ.ಎಸ್.ನಾರಾಯಣಸ್ವಾಮಿ ಹೊಸಹಳ್ಳಿ
ಸೀತೆಯನ್ನು ರಾವಣ ಕಿಡ್ನ್ಯಾಪ್ ಮಾಡಿದ್ದು ಲಾಕ್‌ಡೌನಲ್ಲೋ, ಅನ್‌ಲಾಕ್ ಆದಮೇಲೋ?
ಲಕ್ಷ್ಮಣನ ಲಾಕ್‌ಡೌನನ್ನು ಸೀತೆ ಅನ್‌ಲಾಕ್ ಮಾಡಿದಮೇಲೆ.

ಹೆಚ್.ವಿ. ರಂಗನಾಥ, ಬೆಂಗಳೂರು
ಕೊರೊನಾದಿಂದಾಗಿ ಭೂರಿ ಭೋಜನ ಮಾಡಲು ಸಾಧ್ಯವಿಲ್ಲವಾಗಿದೆ. ಪರಿಹಾರ ತಿಳಿಸಿ ಸಾರ್?
ತಿಂದು ಹೆಚ್ಚಾಗಿ ಏದುಸಿರಾದರೆ ಉಸಿರಾಟದ ತೊಂದರೆಗೆ ಆಸ್ಪತ್ರೆಗೆ ಹಾಕಿಯಾರು. ಸದ್ಯದಲ್ಲಿ ಡಯಟ್ಟೇ ಬೆಸ್ಟು.

ಹೆಚ್.ಕೆ. ಸುಬ್ಬಲಕ್ಷ್ಮಿ, ಕೋಲಾರ
ಶುಕ್ರವಾರಕ್ಕೂ, ಸಿನಿಮಾ ಬಿಡುಗಡೆಗೂ ಏನು ಸಂಬಂಧ?
ಒಕ್ಕಣ್ಣಿನ ಕ್ಯಾಮೆರಾದಲ್ಲಿ ತೆಗೆದದ್ದನ್ನು ಒಕ್ಕಣ್ಣನ ದಿನದಂದೇ ಬಿಡುಗಡೆ ಮಾಡುವುದು ಸೂಕ್ತವೆಂದು.

ವಿ.ಕೆ. ಹಳ್ಯಾಳ್, ಬನಹಟ್ಟಿ
ಮನೆಯ ಕಿಟಕಿಗೂ, ಮನದ ಕಿಟಕಿಗೂ ವ್ಯತ್ಯಾಸವೇನಿದೆ?



ಇದನ್ನು ತೆರೆದರೆ ಕೋಣೆಗೆ ಬೆಳಕು; ಅದನ್ನು ತೆರೆದರೆ ಮಾನವತೆಗೆ ಬೆಳಕು.

ಹೆಚ್.ವಿ. ಶ್ರೀಧರ್, ಬೆಂಗಳೂರು
ನಿಜಕ್ಕೂ ಬ್ರೇಕಿಂಗ್ ನ್ಯೂಸ್‌ನ ಮೊದಲಿಗನಾರು?
ನಾರದ. ಆದ್ದರಿಂದಲೇ ಇಂದಿಗೂ ವಾಹಿನಿಗಳದು ಅದೇ ಬುದ್ಧಿ.

ಟಿ.ಕೆ. ಮೂರ್ತಿ, ಉಜಿರೆ
ನಮ್ಮ ಪ್ರಶ್ನೆಗೆ ಉತ್ತರ ನೀಡುವ ನಿಮಗೂ, ಉತ್ತರಕುಮಾರನಿಗೂ ವ್ಯತ್ಯಾಸವೇನು?
ಸವಾಲು ಎದುರಾದಾಗ ಉತ್ತರ.

**ರಾಮ್**

ಪ್ರಶ್ನೆ ಕಳುಹಿಸಲು: editorsu@sudha.co.in